# ಲೈಂಗಿಕತೆಗೂ ಲಿಂಗಭೇದವೆ?



■ ಡಾ. ಅರುಣ ಯಡಿಯಾಳ್

ಲಿಂಗ, ಕಾಮ, ರತಿಕ್ರೀಡೆ, ಸಂಭೋಗ.. ಯಾವ ಶಬ್ದದ ಹಂಗಿನಲ್ಲಿ ಈ ಲೈಂಗಿಕತೆಯನ್ನು ಸಂಬೋಧಿಸಿದರೂ, ಅದು ಕೇಳುವವರ, ಓದುವವರ ಕಿವಿ, ಮನಸ್ಸನ್ನು ಒಮ್ಮೆ ನಿಮಿರುವುದಂತೂ ಸತ್ಯ! ಏಕೆಂದರೆ ಅದರಲ್ಲಿ ಏನೋ ಒಂಥರಾ ರೋಚಕತೆಯೂ ಇದೆ; ರಹಸ್ಯತೆಯೂ ಇದೆ; ಅದರಲ್ಲಿ ಸುಖ, ಮಜಾ, ಆತ್ಮೀಯತೆ, ಕಂಡು ಕೊಂಡವರೂ ಇದ್ದಾರೆ. ಅದರಲ್ಲಿ ನಾಚಿಕೆ, ಭಯ, ಮುಜುಗರ, ಅಪಾಯವನ್ನು ಅನುಭವಿಸಿದವರೂ ಇದ್ದಾರೆ! ಈ ರೀತಿಯ ತದ್ವಿರುದ್ಧ ಭಾವನೆಗಳನ್ನು ಜನಸ್ತೋಮದ ಮಸ್ತಿಷ್ಕದಲ್ಲಿ ಹುಟ್ಟು ಹಾಕಬಲ್ಲ, ಈ ಲೈಂಗಿಕತೆಯನ್ನು, ಇಂದಿಗೂ ನಮ್ಮ ಸಮಾಜ ಮಡಿವಂತಿಕೆಯ ಮುಸುಕಿನೆಡೆಯಲ್ಲೇ ನೋಡಿ, ಇಣುಕಿ ತೃಪ್ತಿಪಡುತ್ತದೆಯೇ ಹೊರತು, ಅದರ ಬಗ್ಗೆ ಮುಕ್ತವಾಗಿ ಚರ್ಚಿಸುವ ಗೋಜಿಗೇ ಹೋಗಿಲ್ಲ! ಹಾಗಿದ್ದಾಗ ಈ ಲೈಂಗಿಕತೆ ಏನು ಎಂಬುದನ್ನು ವಿವರಿಸಲು ಪಂಡಿತರಾದವರೂ ಕೆಲವೊಮ್ಮೆ ಹೆಣಗಾಡಬೇಕಾಗುತ್ತದೆ.

## ಲಿಂಗದ ಹಂಗಿಲ್ಲ

ಸಾಮಾನ್ಯ ಜ್ಞಾನವಿರುವ ಎಲ್ಲ ವಯಸ್ಕರಲ್ಲಿ ಈ ಲೈಂಗಿಕತೆಯ ಅಲ್ಪಸ್ವಲ್ಪ ಅರಿವಿದ್ದರೂ, ಅದರ ಗುಣಲಕ್ಷಣ ನಿರೂಪಣೆ ಕೊಂಚ ಕ್ಲಿಷ್ಟಕರವಾದ ಕೆಲಸವೇ ಸರಿ. ಈ ಲೈಂಗಿಕತೆಯ ಸೀಮೆ, ಈ ಲಿಂಗಕ್ಕೆ ಸಂಬಂಧಿಸಿದ ಎಲ್ಲಾ ಭಾವನೆ, ಯೋಚನೆ, ಕಲ್ಪನೆಗಳನ್ನೆಲ್ಲಾ ಒಳಗೊಂಡು, ಕಾಮೇಚ್ಛೆ ಹಾಗೂ ಲೈಂಗಿಕ ಸ್ವಭಾವ ಅಥವಾ ವರ್ತನೆಗಳಲ್ಲಿ ಕೊನೆಗೊಳ್ಳುತ್ತದೆ. ಎಲ್ಲಾ ಜೀವ ಪ್ರಬೇಧಗಳಿಗಿಂತ, ಮನುಷ್ಯ ಜೀವಿ ಜಾಸ್ತಿ 'ಲೈಂಗಿಕ ಜೀವಿ' ಎಂದು ಸ್ಪಷ್ಟವಾಗಿಯೇ ಹೇಳಬಹುದು. ಏಕೆಂದರೆ, ಮನುಷ್ಯರಲ್ಲಿ ಮಾತ್ರ ಈ ಕ್ರಿಯೆ ಕೇವಲ ಜೈವಿಕ ಅಥವಾ ಸಂತಾನೋತ್ಪತ್ತಿಯ ಕಾರಣಕ್ಕಾಗಿ ಮೀಸಲಾಗಿರದೆ, ಸುಖ ಹಾಗೂ ಅನುಭವಕ್ಕೋಸ್ಕರವೂ ನಡೆಯುತ್ತದೆ. ಕೂಡುವಿಕೆಗಾಗಿ ಯಾವುದೇ ಋತುವಿನ ಹಂಗಿರದ ಮನುಷ್ಯ ಜೀವಿ, ಬೇರೆ ಜೀವಿಗಳಂತೆ ಮಾತ್ರ ಈ ಕ್ರಿಯೆಯನ್ನು ಬಹಿರಂಗವಾಗಿ ಮಾಡದೇ, ಕೇವಲ ಖಾಸಗಿ ಕ್ಷಣಗಳಿಗೆ ಮೀಸಲಿಡುತ್ತಾನೆ. ಅದೂ ಎಷ್ಟೋ ಕಟ್ಟಳೆ ನಿಯಮಗಳ ಬೇಲಿಯೊಳಗೇ ಇವೆಲ್ಲಾ ನಡೆಯುತ್ತದೆ. ಇಷ್ಟಾದರೂ, ಮನುಷ್ಯ ಜೀವಿಯ ಈ ಲೈಂಗಿಕತೆಯಲ್ಲಿ ಬೇಕಾದಷ್ಟು ಭಿನ್ನತೆ, ವಿಶೇಷತೆ, ವೈವಿಧ್ಯತೆ ಇರುವುದು ಇನ್ನೊಂದು ಸೋಜಿಗದ ಸಂಗತಿಯೆಂದೇ ಹೇಳಬಹುದು. ಗಂಡಾಗಲೀ, ಹೆಣ್ಣಾಗಲೀ, ಇಬ್ಬರೂ ಮನುಜರೇ ಆದರೂ, ಅವರಿಬ್ಬರ ನಡುವೆಯೇ ಈ ಲೈಂಗಿಕತೆ ಬೇರೆ ಬೇರೆ ರೀತಿಯಲ್ಲಿ ಅನಾವರಣಗೊಳ್ಳುವುದರ ಜೊತೆಗೆ, ಅವರಿಬ್ಬರೂ ಜೊತೆಯಲ್ಲಿಯೇ ಅನುಭವಿಸುವ ಈ ಕ್ರಿಯೆ, ಇಬ್ಬರಲ್ಲೂ ಬೇರೆ ಬೇರೆ ಅನುಭವಗಳನ್ನು ಹುಟ್ಟು ಹಾಕಬಹುದು. ಇವರಿಬ್ಬರ ನಡುವಿನ ಈ ವ್ಯತ್ಯಾಸಗಳಿಗೆ, ಜೈವಿಕ ಕಾರಣಗಳಿಗಿಂತಲೂ, ಸಾಮಾಜಿಕ, ಸಾಂಸ್ಕೃತಿಕ ದೃಷ್ಟಿಕೋನಗಳು ತಮ್ಮದೇ ಬಣ್ಣ ಬಳಿದುಬಿಡುತ್ತವೆ ಎಂಬುದು ಕೂಡ ನಿಜವೇ ಎನಿಸಿದೆ.

## ಲಿಂಗ ಭೇದ ಹಾಗೂ ಸಾಮ್ಯತೆ

ಎರಡು ದಶಕಗಳ ಹಿಂದೆಯೇ, ಜಾನ್ ಗ್ರೇ ಅವರ, **Men are from Mars and women are from Venus** (ಮಂಗಳ ಗ್ರಹದ ಗಂಡಸರು ಹಾಗೂ ಶುಕ್ರದಿಂದ ಬಂದಿಳಿದ ಮಹಿಳೆಯರು) ಎಂಬ ಸಾಮಾಜಿಕ ಪುಸ್ತಕ, ಭಾರೀ ಜನಪ್ರಿಯತೆ ಕಂಡಿತು. ಇದರಲ್ಲಿ ಹೇಗೆ ಗಂಡಸರು ಹಾಗೂ ಹೆಂಗಸರು ಬೇರೆ ಬೇರೆ ರೀತಿ ಯೋಚಿಸುತ್ತಾರೆ, ಭಾವಿಸುತ್ತಾರೆ ಹಾಗೂ ವರ್ತಿಸುತ್ತಾರೆ ಎಂಬುದನ್ನು ಸವಿವರವಾಗಿ ಬರೆದ ಲೇಖಕರು, ಅವರ ಲೈಂಗಿಕತೆಯಲ್ಲಿರುವ ಭೇದವನ್ನೂ ಎತ್ತಿತೋರಿಸಿದ್ದಾರೆ. ಒಂದೇ ಪ್ರಭೇಧಕ್ಕೆ ಸೇರಿದ್ದರೂ ತೀರಾ ಅನ್ಯ ಗ್ರಹದಿಂದ ಬಂದವರಷ್ಟು ವಿಭಿನ್ನವಾಗಿ, ಈ ಗಂಡಸರು ಹೆಂಗಸರು ಇರುವುದು ನಿಜವೋ ಅಥವಾ ಅದೊಂದು ಸಾಮಾಜಿಕವಾಗಿ ಹರಡಿರುವ ಜನಪ್ರಿಯ ಅಭಿಪ್ರಾಯ ಅಷ್ಟೆಯಾ? ಲೈಂಗಿಕತೆಯ ವಿಷಯದಲ್ಲೂ ಇದೆ ಎನ್ನಲಾಗುವ ಈ ಭೇದಗಳು, ಇರುವುದೇ ನಿಜವಾದರೆ ಅದು ಜೈವಿಕ ಕಾರಣಗಳಿಂದ ಬಂದಿರುವುದೋ ಅಥವಾ ಈ ಜನಾಂಗ, ಈ ಸಮಾಜದ, ಈ ಸಂಸ್ಕೃತಿ ನಮ್ಮ ಮೇಲೆ ಹೇರಿರುವ ಧೋರಣೆಗಳೇ ಇವಕ್ಕೆ ಕಾರಣವಿರಬಹುದೇ? ಕಾರಣವೇನೇ ಇರಲಿ, ಭೇದ ಇರುವುದಂತೂ ನಿಜ!

ಲೈಂಗಿಕ ಆಕರ್ಷಣೆಯ ವಿಷಯದಲ್ಲಿ, ಸಾಮಾನ್ಯವಾದ ಧೋರಣೆಯೊಂದನ್ನು ನಾವು ಸಮಾಜದಲ್ಲಿ ಕಾಣಬಹುದು. ಸಿನಿಮಾದ ಹಾಡೊಂದು 'ಹೆಣ್ಣಿನಲ್ಲಿ ಅಂದವಿಟ್ಟನೋ ನಮ್ಮ ಶಿವಾ... ಗಂಡಿನಲ್ಲಿ ಆಸೆ ಇಟ್ಟನೋ...' ಅಂದರೆ ಹೆಣ್ಣು ಅಂದವಾಗಿ ಕಾಣಬೇಕಷ್ಟೇ ಅವಳಿಗೆ ಆಸೆಗಳು ಅಷ್ಟಾಗಿ ಇರುವುದಿಲ್ಲ. ಅಥವಾ ಇರಬಾರದು! ಆದರೆ, ಗಂಡಸಾದವನಿಗೆ ಚೆಂದದ ಹೆಣ್ಣನ್ನು ನೋಡಿದಾಕ್ಷಣ 'ಆಸೆ' ಬರಬೇಕು. ಅದೇ ಅವನ ಗಂಡಸುತನದ ಗುರುತು! ಅಂದರೆ ಲೈಂಗಿಕ ಆಕರ್ಷಣೆ... ಲೈಂಗಿಕವಾಗಿ ಪ್ರಚೋದನೆಗೊಳಗಾಗಬಹುದಾದ ಸಾಧ್ಯತೆ ಹಾಗೂ ಲೈಂಗಿಕವಾಗಿ ಪ್ರತಿಕ್ರಿಯಿಸುವ ಕ್ಷಮತೆ ಗಂಡಸರಿಗೆ ಸ್ವಾಭಾವಿಕ. ಸ್ವಾಭಾವಿಕವಾಗೇ ಅಧಿಕ ಎಂಬೊಂದು ಉಲ್ಲೇಖ ಸ್ಪಷ್ಟವಾಗಿಯೇ ಗೋಚರಿಸುತ್ತದೆ. ಇದನ್ನು ಸಮಾಜ ಒಪ್ಪುವುದಷ್ಟೇ ಅಲ್ಲದೆ, ಅದನ್ನು ಪರೋಕ್ಷವಾಗಿ ಪ್ರೋತ್ಸಾಹಿಸುತ್ತದೆ ಕೂಡ!

ಅದೇ ಉದಾರತೆ, ಹೆಣ್ಣಿನಲ್ಲಿರುವ ಲೈಂಗಿಕತೆಗೆ ದಕ್ಕುವುದಿಲ್ಲ ಅನ್ನುವುದೂ ಅಷ್ಟೇ ದಿಟ. ಉದಾಹರಣೆಗೆ ಹೆಣ್ಣಿನ ಸೌಂದರ್ಯವನ್ನು ಮೆಚ್ಚಿ ಆಕರ್ಷಿತರಾಗುವ ತಮ್ಮ ಕಾಮಿಚ್ಛೆಯನ್ನು ನೇರವಾಗೋ, ಪರೋಕ್ಷವಾಗೋ ತೋರಿಸಿಕೊಳ್ಳುವ ಗಂಡಸರನ್ನು ಸಮಾಜ ಒಪ್ಪಿ 'ರಸಿಕ; ಅಂತಲೋ, 'ನಿಜ'ವಾದ ಗಂಡಸು ಅಂತಲೋ ಹೇಳಿ ವಹಿಸಿಕೊಂಡುಬಿಡುತ್ತದೆ. ಅದೇ ರೀತಿಯ ಸ್ವಭಾವ ಹೆಣ್ಣುಗಳಲ್ಲಿ ಕಂಡುಬಂದರೆ ಮಾತ್ರ ಕೆಂಗಣ್ಣು ಬಿಟ್ಟು, ಶೀಲ ಇಲ್ಲದವಳು ಸಡಿಲ ನೈತಿಕತೆಯುಳ್ಳವಳು ಎಂಬೆಲ್ಲಾ ಹಣೆಪಟ್ಟಿಗಳನ್ನು ಸಿದ್ಧಮಾಡಿಟ್ಟುಕೊಳ್ಳುತ್ತದೆ. ಅಲಂಕಾರ, ಶೃಂಗಾರ ಹೆಣ್ಣಿನ ಹಕ್ಕೇ ಎಂದು ವಾದಿಸುವ ಸಮಾಜದ ಒಂದು ಭಾಗ, ಅವರು ಮೈ ತೋರುವ ಬಟ್ಟೆ ತೊಟ್ಟರೆ, ಕಾಮ ಪ್ರಚೋದಿಸಲು ಈ ರೀತಿ ಬಟ್ಟೆ ತೊಡುತ್ತಾರೆ ಅಂತಲೂ ಆರೋಪಿಸುತ್ತದೆ. ■